Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ
## ವಾರ್ಡ್ ಸಮಿತಿ ಸಭೆ ದಿನಾಂಕ: 07/10/2020 ರ
## ಸಭಾ ನಡವಳಿ

ದಿನಾಂಕ: 07/10/2020 ರಂದು ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು:

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳ | ಹುದ್ದೆ |
|---|---|---|
| 1 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗೆ ಕೋಶ–ಉತ್ತರ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್–198, ಹೆಮ್ಮಿಗೆಪುರ |
| 3 | ಶ್ರೀ ಬಸವೇಗೌಡ | ಕಂದಾಯ ಪರಿವೀಕ್ಷಕರು, ವಾರ್ಡ್–198 |
| 4 | ಶ್ರೀ ರವಿಚಂದ್ರಚಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು, ಕೆಂಗೇರಿ |
| 5 | ಶ್ರೀಮತಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀಮತಿ ದೀಪಾ.ವಿ | ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ. |
| 7 | ಶ್ರೀ ಸಾಯಿ ಸಂದೇಶ್ ಬಿ.ಎಸ್. | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ |
| 8 | ಶ್ರೀ ರಾಮ್‌ಕುಮಾರ್.ಜಿ | ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ. |
| 9 | ಶ್ರೀ ಶಿವಪ್ಪ | ಕಂದಾಯ ಪರಿವೀಕ್ಷಕರು, ವಾರ್ಡ್–198 |

Scanned with CamScanner

| | | |
|---|---|---|
| 10 | ಶ್ರೀ ಎಸ್. ವಿಶ್ವನಾಥ್ | ಸಹಾಯಕ ಅಭಿಯಂತರರು<br>ರಸ್ತೆ ಮೂಲಭೂತ ಸೌಕರ್ಯ,<br>ರಾಜರಾಜೇಶ್ವರಿನಗರ ವಿಭಾಗ |
| 11 | ಶ್ರೀ ಚಂದ್ರಶೇಖರ್.ಹೆಚ್ | ಸಹಾಯಕ ಅಭಿಯಂತರರು<br>ಬೆಸ್ಕಾಂ |
| 12 | ಶ್ರೀ ಗವಿ ಸಿದ್ದಯ್ಯ | ಕಿರಿಯ ಅಭಿಯಂತರರು (ವಿದ್ಯುತ್)<br>ರಾಜರಾಜೇಶ್ವರಿನಗರ ವಲಯ |
| 13 | ಶ್ರೀ ವೆಂಟೇಶ್ | ತೋಟಗಾರಿಕಾ ಪರಿವೀಕ್ಷಕರು<br>ರಾ.ರಾ.ನಗರ ವಲಯ, ಬಿಬಿಎಂಪಿ |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿಆರ್/35/20-21 ದಿನಾಂಕ: 02.10.2020ರ ತಿದ್ದುಪಡಿ ಕಛೇರಿ ಆದೇಶದಲ್ಲಿ ಶ್ರೀ ಶಿವಕುಮಾರ್, ಕಾರ್ಯಪಾಕ ಅಭಿಯಂತರರು ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗಿ ಕೋಶ-ಉತ್ತರ ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿರುವುದರಿಂದ ಸದರಿಯವರಿಗೆ ಸಮಿತಿಯ ಪರವಾಗಿ ಸ್ವಾಗತವನ್ನು ಕೋರುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **<u>ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ</u>:-** ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ರವಿಚಂದ್ರಾಚಾರಿ ಟಿ.ಕೆ. ರವರು ಮಾತನಾಡಿ ಬೆಂಗಳೂರುನಲ್ಲಿ ಕೋವಿಡ್-19 ಸೋಂಕು ದಿನದಿಂದ ದಿನಕ್ಕೆ ಹೆಚ್ಚಾಗಿ ಹರಡುತ್ತಿದ್ದು, ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು ಅತ್ಯಾವಶ್ಯಕವಾಗಿರುವುದರಿಂದ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ತಮ್ಮ ಬಡಾವಣೆಯ ನಿವಾಸಿಗಳು ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ತಿಳಿಸಿದರು ಹಾಗೂ ನಂ.198ರ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 400 ಕೋವಿಡ್ ಟೆಸ್ಟ್‌ಗಳನ್ನು ನಡೆಸಲು ಗುರಿ ನಿಗಧಿಪಡಿಸಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿರುವ ವಿವಿಧ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ತಮ್ಮ ತಮ್ಮ ಬಡಾವಣೆಯಲ್ಲಿ ಹೆಚ್ಚಿನ ಗಮನಹರಿಸಿ ಕೋವಿಡ್-19ರ ಟೆಸ್ಟ್‌ಗಳನ್ನು ಮಾಡಲು ಸಹಕರಿಸಬೇಕಾಗಿ ಕೋರಿದರು ಮತ್ತು ಮಾಸ್ಕ್ ದರಿಸದೇ

ಮು.ತಿ.ನೋ.....

Scanned with CamScanner

ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾವಳಿಗಳನ್ವಯ ದಂಡ ವಿಧಿಸುವುದು & ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಮನವೊಲಿಸುವ ಕೆಲಸವನ್ನು ನಿರ್ವಹಿಸುವಂತೆ ಸೂಚಿಸಿದರು.

2. <u>ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಆರ್.ಆರ್. ಬಡಾವಣೆಯಲ್ಲಿ ಸರಿಯಾದ ಸಮಯಕ್ಕೆ ನೀರನ್ನು ಸರಬರಾಜು ಮಾಡುತ್ತಿರುವುದಿಲ್ಲವೆಂದು ಮತ್ತು ನಾಲ್ಕು ದಿನಕ್ಕೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದಾಗಿ ಆರ್.ಆರ್. ಬಡಾವಣೆಯ ನಿವಾಸಿಗಳು ಸಭೆಗೆ ತಿಳಿಸಿದರು. ಈ ಸಂಬಂಧ ಸಹಾಯಕ ಅಭಿಯಂತರರು, ಬೆಂಗಳೂರು ಜಲಮಂಡಳಿ ರವರು ಮಾತನಾಡಿ ಸಿ.ಎಂ.ಸಿ.ಯಿಂದ ಪಾಲಿಕೆಗೆ ಹಸ್ತಾಂತರಗೊಂಡಿರುವ ಪ್ರದೇಶಕ್ಕೆ ನಾಲ್ಕು ದಿನಗಳಿಗೊಮ್ಮೆ ಕುಡಿಯುವ ನೀರನ್ನು ಸರಬರಾಜು ಮಾಡಲು ಆದೇಶವಾಗಿದ್ದು, ಅದರಂತೆ ನೀರು ಸರಬರಾಜು ಮಾಡಲು ಕ್ರಮ ಕೈಗೊಂಡಿರುವುದಾಗಿ ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಯವರು ಮಾತನಾಡಿ ನಾಲ್ಕು ದಿನಕ್ಕೊಮ್ಮೆ ನೀಡುತ್ತಿರುವ ಕುಡಿಯುವ ನೀರು ಸಮರ್ಪಕವಾಗಿ ಮತ್ತು ನಿಗಧಿತ ಪರಿಮಾಣದಲ್ಲಿ ವಿತರಣೆಯಾಗುತ್ತಿರುವ ಬಗ್ಗೆ ಸ್ಥಳ ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳಲು ಜಲಮಂಡಳಿ ಅಧಿಕಾರಿಯವರಿಗೆ ಸೂಚಿಸಿದರು.

3. <u>ಘನತ್ಯಾಜ್ಯ ನಿರ್ವಹಣೆ ಬಗ್ಗೆ</u>:- ವಾರ್ಡ್ ನಂ.198ರ ಕೆಂಚೇನಹಳ್ಳಿ ಮುಖ್ಯ ರಸ್ತೆಯಲ್ಲಿ ಸೇತುವೆಯ ಹತ್ತಿರ ಸಾರ್ವಜನಿಕರು ತ್ಯಾಜ್ಯವನ್ನು ಪ್ಲಾಸ್ಟಿಕ್ ಕವರಿನಲ್ಲಿ ಕಟ್ಟಿ ಎಸೆದು ಹೋಗುತ್ತಿರುವ ಬಗ್ಗೆ ಹಾಗೂ ಇದರಿಂದಾಗಿ ಬ್ಲಾಕ್‌ಸ್ಪಾಟ್ ನಿರ್ಮಾಣವಾಗಿರುವ ಬಗ್ಗೆ ಹಾಗೂ ಸೊಳ್ಳೆಗಳ ನಿಯಂತ್ರಣಕ್ಕೆ ಸ್ಪ್ರೇ ಹಾಗೂ ಫಾಗಿಂಗ್‌ನ್ನು ಮಾಡುತ್ತಿಲ್ಲವೆಂದು ಸಭೆಯ ಗಮನಕ್ಕೆ ತಿಳಿಸಿದರು. ಈ ಸಂಬಂಧ ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸದರಿ ಪ್ರದೇಶವು ವಾರ್ಡ್-198 ಮತ್ತು ವಾರ್ಡ್-160ರ ಮಧ್ಯಭಾಗದಲ್ಲಿ ಬರುವ ಪ್ರದೇಶವಾಗಿದ್ದು, ವಾರ್ಡ್ ನಂ.160ರಲ್ಲಿ ವಾಸಿಸುವ ನಿವಾಸಿಗಳು ಪ್ರತಿ ದಿನ ಬೆಳಿಗ್ಗೆ ಕೆಲಸಕ್ಕೆ ಹೋಗುವ ಸಮಯದಲ್ಲಿ ತ್ಯಾಜ್ಯವನ್ನು ಬಿಸಾಡುತ್ತಿರುವುದಾಗಿ ತಿಳಿಸಿದರು ಮತ್ತು ಇದನ್ನು ತಡೆಗಟ್ಟಲು ಮಾರ್ಷಲ್‌ಗಳನ್ನು ನೇಮಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು ಹಾಗೂ ಸೊಳ್ಳೆಗಳ ನಿಯಂತ್ರಣಕ್ಕೆ ಸ್ಪ್ರೇ ಮಾಡುವ ಸಿಬ್ಬಂದಿಗಳು ಕೋವಿಡ್-19 ಪಕರಣಗಳು ಕಂಡುಬಂದಂತಹ ಸ್ಥಳಗಳಲ್ಲಿ ಹಾಗೂ ಮನೆಗಳಲ್ಲಿ ಸ್ಪ್ರೇ ಮಾಡಲು ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್

ಮು.ತಿ.ನೋ.....

Scanned with CamScanner

ನಂ.160ರ ಘನತ್ಯಾಜ್ಯ ವಿಭಾಗದ ಅಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆಯನ್ನು ಪರಿಹರಿಸುವುದಾಗಿ ತಿಳಿಸಿದರು.

4. <u>ವಿದ್ಯುತ್ ಬೀದಿ ದೀಪಗಳ ನಿರ್ವಹಣೆ</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಕೆಂಗೇರಿ, ಕೋಡಿಪಾಳ್ಯ, ಮೈಲಸಂದ್ರ ಪ್ರದೇಶಗಳಲ್ಲಿ ವಿದ್ಯುತ್ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು ಹಾಗೂ ರಾತ್ರಿ ವೇಳೆಯಲ್ಲಿ ಸಾರ್ವಜನಿಕರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುತ್ತದೆ ಎಂದು ಮತ್ತು ವಿದ್ಯುತ್ ಕಂಬಕ್ಕೆ ಅಳವಡಿಸಿರುವ ಟೈಮರ್‌ಗಳೆಲ್ಲವು ಸುಟ್ಟು ಹೋಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಬಿಬಿಎಂಪಿಯ ವಿದ್ಯುತ್ ವಿಭಾಗದ ಕಿರಿಯ ಅಭಿಯಂತರರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಬೀದಿ ದೀಪ ನಿರ್ವಹಣೆಯ ಗುತ್ತಿಗೆದಾರರಿಗೆ ಅಗತ್ಯ ರಿಪೇರಿ ಕಾರ್ಯವನ್ನು ನಿರ್ವಹಿಸಿ ದುರಸ್ಥಿಗೊಳಿಸಲು ಸೂಚಿಸಿದರು ಮತ್ತು ಬೀದಿ ದೀಪಕ್ಕೆ ಆನ್ & ಆಫ್ ಸ್ವಿಚ್‌ಗಳನ್ನು ಅಳವಡಿಸಲು ತಿಳಿಸಿದರು.

5. <u>ಬೆಂಗಳೂರು ವಿದ್ಯುತ್ ಸರಬರಾಜು ನಿಗಮ</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಕೆ.ಇ.ಬಿ. ವ್ಯಾಪ್ತಿಯಲ್ಲಿ ವಿದ್ಯುತ್ ಸಂಬಂಧಿಸಿದ ದೂರುಗಳನ್ನು ಸಲ್ಲಿಸಲು ಹಾಗೂ ವಿದ್ಯುತ್ ಬಿಲ್‌ಗಳನ್ನು ಪಾವತಿಸಲು ಕೆಂಗೇರಿ ಬೆಸ್ಕಾಂ ಕಛೇರಿಗೆ ತೆರಳಬೇಕಾಗಿದ್ದು, ಇದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಬಿ.ಹೆಚ್.ಇ.ಎಲ್. ಸಭೆಗೆ ತಿಳಿಸಿದರು. ಈ ಸಂಬಂಧ ಬೆಸ್ಕಾಂನ ಸಹಾಯಕ ಇಂಜಿನಿಯರ್ ರವರು ಮಾತನಾಡಿ ದೂರುಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದ್ದು ಮತ್ತು ಬಿಲ್‌ಪಾವತಿಯನ್ನು ಸಹ ಆನ್‌ಲೈನ್ ಮೂಲಕವೂ ಪಾವತಿಸಬಹುದೆಂದು ಸಭೆಗೆ ತಿಳಿಸಿದರು. ಮುಂದುವರೆದು ಬಿಲ್ ಪಾವತಿಸಲು ಸಂಚಾರಿ ಪಾವತಿ ಕೇಂದ್ರವನ್ನು ವ್ಯವಸ್ಥೆಗೊಳಿಸುವುದಾಗಿ ಸಭೆಗೆ ತಿಳಿಸಿದರು.

6. <u>ಟ್ರೀ ಕೆನೋಪಿ ಸಂಬಂಧಿಸಿದ ದೂರುಗಳು</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಪವರ್‌ಲೈನ್ ಕೆಳಗಡೆ ಮರಗಳು ಬೆಳೆದು ವಿದ್ಯುತ್ ತಂತಿಗಳಿಗೆ ತಗುಲುತ್ತಿದ್ದು, ಮಳೆ ಬಂದಂತಹ ಸಂಧರ್ಭದಲ್ಲಿ ವಿದ್ಯುತ್ ಪ್ರವಹಿಸಿ ಅಪಾಯವಾಗುವ ಸಂಭವವಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಸಹಾಯಕ ಅಭಿಯಂತರರು ಬೆಸ್ಕಾಂ ಮಾತನಾಡಿ ಕಾಲಕಾಲಕ್ಕೆ ವಿದ್ಯುತ್ ಲೈನ್ ಕೆಳಗೆ ಬೆಳೆದುರುವಂತಹ ಮರಗಳ ರೆಂಬೆಗಳನ್ನು ಟ್ರಿಮ್ ಮಾಡಲಾಗುತ್ತಿದ್ದು, ಯಾವುದೇ ಅನಾಹುತಗಳಾಗದಂತೆ ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು ಮತ್ತು ಭಾರಿ ಮರಗಳು ವಿದ್ಯುತ್ ಕಂಬಗಳ ಮೇಲೆ ವಾಲಿಕೊಂಡಿದ್ದು ಅದನ್ನು ತೆರವುಗೊಳಿಸುವುದು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿಸಿದರು.

ಪು.ತಿ.ನೋ.....

Scanned with CamScanner

7. <u>ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ</u> :- (1) ವಾರ್ಡ್ ನಂ.198ರಲ್ಲಿ ಮಹಾವೀರ್ ಲೇಕ್ಸ್ ಅಪಾರ್ಟ್‌ಮೆಂಟ್ ಹಿಂಭಾಗದ ರಸ್ತೆಯು ತುಂಬಾ ಹಾಳಾಗಿದ್ದು, ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡಿ ರಸ್ತೆ ದುರಸ್ಥಿ ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ದುರಸ್ಥಿ ಕಾರ್ಯವನ್ನು ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

(2) ವಾರ್ಡ್ ನಂ.198ರಲ್ಲಿ ಬರುವ ಬಾಗೇಗೌಡ ಮುಖ್ಯರಸ್ತೆಯಲ್ಲಿ ರಸ್ತೆ ಕಾಮಗಾರಿಯು ನಡೆಯುತ್ತಿದ್ದು, ರಸ್ತೆಯಲ್ಲಿ ಬರುವ ತ್ಯಾಜ್ಯವನ್ನು ಅಲ್ಲಿನ ಅಕ್ಕಪಕ್ಕದ ನಿವೇಶನಗಳಲ್ಲಿ ಹಾಕುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ರಸ್ತೆ ಕಾಮಗಾರಿಯು ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ಕೈಗೊಳ್ಳಲಾಗುತ್ತಿದ್ದು, ತ್ಯಾಜ್ಯವನ್ನು ತೆರವುಗೊಳಿಸಲು ಸಭೆಗೆ ಹಾಜರಾಗಿದ್ದ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಇಂಜಿನಿಯರ್ ರವರಿಗೆ ಸೂಚಿಸಲಾಯಿತು.

(3) ವಾರ್ಡ್ ನಂ.198ರಲ್ಲಿ ಬರುವ ಕೆಂಗೇರಿ ಉತ್ತರಹಳ್ಳಿ ಮುಖ್ಯ ರಸ್ತೆಯ ವೃಷಭಾವತಿ ಕಾಲುವೆಗೆ ನಿರ್ಮಿಸಿರುವ ಸೇತುವೆಯ ಮೇಲಿನ ಸಿಮೆಂಟ್ ಕಾಂಕ್ರೀಟ್ ಸ್ಲಾಬ್‌ಗಳು ಮುರಿದುಹೋಗಿದ್ದು ಮತ್ತು ಮಹಾವೀರ್ ಲೇಕ್ ಮುಂಭಾಗ ರಸ್ತೆಯಲ್ಲಿ ಎರಡುಕಡೆ ಗಿಡಗಳು ಬೆಳೆದಿದ್ದು ದ್ವಿ-ಚಕ್ರ ವಾಹನ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಇಂಜಿನಿಯರ್‌ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು ಹಾಗೂ ರಸ್ತೆಯ ಎರಡೂ ಬದಿಗಳಲ್ಲಿ ಬೆಳೆದಿರುವ ಗಿಡಗಳನ್ನು ತೆರವುಗೊಳಿಸುವಂತೆ ವಾರ್ಡ್‌ನ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

(4) ವಾರ್ಡ್ ನಂ.198ರ ಕೆಂಚೇನಹಳ್ಳಿ ಮುಖ್ಯರಸ್ತೆ (ಟಾಟಾ ಶೋರೂಂ ರೋಡ್)ಗೆ ಡಾಂಬರೀಕರಣಗೊಳಿಸಿ ಹಲವು ವರ್ಷಗಳಾಗಿದ್ದು, ರಸ್ತೆಯು ರಸ್ತೆ ಗುಂಡಿಗಳಿಂದ ಕೂಡಿರುತ್ತದೆ ಮತ್ತು ಸುಮಾರು ವರ್ಷಗಳಿಂದ ರಸ್ತೆಯ ಎರಡು ಇಕ್ಕೆಲುಗಳಲ್ಲಿರುವ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಮಳೆನೀರು ಸರಾಗವಾಗಿ ಹರಿಯದೆ ನೀರು ನಿಂತು ಸಾಂಕ್ರಾಮಿಕ ರೋಗ ಹರಡುವ ಭೀತಿ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಇಂಜಿನಿಯರ್‌ರವರಿಗೆ ಸೂಚಿಸಿದರು.

ಮು.ತಿ.ನೋ.....

Scanned with CamScanner

(5) ವಾರ್ಡ್ ನಂ.198ರ ವ್ಯಾಪ್ತಿಯ ಹೆಮ್ಮಿಗೆಪುರದಲ್ಲಿ 110 ಹಳ್ಳಿಗಳ ವ್ಯಾಪ್ತಿಯ ಒಳಚರಂಡಿ ಸ್ಯಾನಿಟರಿ ಲೈನ್ ಕಾಮಗಾರಿ ಪೂರ್ಣಗೊಂಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ವಿಷಯದ ಬಗ್ಗೆ ಮುಂದಿನ ಸಭೆಯಲ್ಲಿ ಇದಕ್ಕೆ ಸಂಬಂಧಿಸಿದ 110 ಹಳ್ಳಿಗಳ್ಳಿ ಕಾಮಗಾರಿ ಅನುಷ್ಠಾನಗೊಳಿಸುತ್ತಿರುವ ಜಲಮಂಡಳಿ ಅಧಿಕಾರಿಗಳಿಂದ ವಿವರವನ್ನು ಪಡೆದು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕೊನೆಯದಾಗಿ ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲ್ಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ದಯಾನಂದ.ಎನ್)
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್–198, ಹೆಮ್ಮಿಗೆಪುರ

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್–198, ಹೆಮ್ಮಿಗೆಪುರ

ಪ್ರತಿಯನ್ನು:–

1) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.
6) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಪು.ತಿ.ನೋ.....

Scanned with CamScanner

9) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

11) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

12) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

Scanned with CamScanner